ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.ಃ 1525/2022

.....................................................................

CW 08
PW 04

| | | |
|---|---|---|
| ಹೆಸರು | ಃ | ಈರಪ್ಪ ಕೆಂಚನ್ನವರ |
| ತಂದೆಯ ಹೆಸರು | ಃ | ನಿಂಗಪ್ಪ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಮುಗದಕೊಪ್ಪ, ತಾಃ ಹಳಿಯಾಳ. |

ದಿನಾಂಕ 07-02-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 1 ರಿಂದ 5, 9 ಮತ್ತು 10 ರವರು ಪರಿಚಯ ಇದ್ದಾರೆ. ಚಾಸಾ 6 ಮತ್ತು 7 ರವರು ಪರಿಚಯವಿಲ್ಲ.

ಸುಮಾರು 4-5 ವರ್ಷಗಳ ಹಿಂದೆ ಚಾಸಾ 1 ರವರ ಮೋಟಾರ ಸೈಕಲ್ ರಾತ್ರಿ ಕಳ್ಳತನ ಆಗಿತ್ತು. ಈ ವಿಚಾರವಾಗಿ ಚಾಸಾ 1 ರವರು ದೂರು ನೀಡಿದರು. ಈ ವಿಚಾರವಾಗಿ ಪೊಲೀಸರು ನನ್ನಿಂದ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರನ್ನು ಈ ಮೊದಲು ನೋಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 07-06-2022 ರಂದು ನೀವು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ಪಿರ್ಯಾದಿ ಮಾರುತಿ ಇವನು 2015 ----------- ನನಗೆ ಸಂಶಯ ಇರುವುದಿಲ್ಲ

ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಮೇರೆಗೆ ಅವರ ಹೇಳಿಕೆಯನ್ನು **ನಿಪಿ 6 ಎಂದು** ಗುರುತಿಸಾಯಿತು.

ದಿನಾಂಕ 28-07-2022 ರಂದು ನೀವು ಪೊಲೀಸರಿಗೆ ಮರುಹೇಳಿಕೆ ನೀಡಿ ಅದರಲ್ಲಿ ಈಗ ತಾವು ಓದಿ ತೋರಿಸಿದ ವಿಷಯ ತಿಳಿಯಿತು ----------- ಹೇಳಿಕೆ ಅಳವಡಿಸಿಕೊಳ್ಳಲು ವಿನಂತಿ ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಮೇರೆಗೆ ಅವರ ಮರುಹೇಳಿಕೆಯನ್ನು **ನಿಪಿ 7 ಎಂದು** ಗುರುತಿಸಾಯಿತು.

ದಿನಾಂಕ 24-08-2022 ರಂದು ನೀವು ಪೊಲೀಸರಿಗೆ ಮರುಹೇಳಿಕೆ ನೀಡಿ ಅದರಲ್ಲಿ ದಿನಾಂಕ 07-06-2022 ರಂದು ಮತ್ತು 28-07-2022 ರಂದು ----------- ಹೇಳಿಕೆ ಅಳವಡಿಸಿಕೊಳ್ಳಲು ವಿನಂತಿ ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಮೇರೆಗೆ ಅವರ ಮರುಹೇಳಿಕೆಯನ್ನು **ನಿಪಿ 8 ಎಂದು** ಗುರುತಿಸಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.